ವಾಸನೆ ಉಂಟಾಗಬಹುದು.

ದಂತ ಕ್ಷಯ, ದಂತಪಾಚಿ, ದಂತಗಾರೆ, ವಸಡಿನ ತೊಂದರೆಗಳಿಂದ ಉಂಟಾಗುವ ಬಾಯಿ ವಾಸನೆಯನ್ನು ಸೂಕ್ತವಾದ ಮೌತ್‌ವಾಶ್ ಬಳಸಿ ಕಡಿಮೆ ಮಾಡಬಹುದು. ಯಾವ ಕಾರಣಕ್ಕಾಗಿ ಬಾಯಿ ವಾಸನೆ ಬರುತ್ತದೆ ಎಂಬುವುದನ್ನು ತಿಳಿದು ಅದಕ್ಕೆ ಸೂಕ್ತ ಚಿಕಿತ್ಸೆ ಪಡೆದ ಬಳಿಕವೇ ಯಾವ ರೀತಿಯ ಮೌತ್ ವಾಶ್ ಬಳಸಬೇಕು ಎಂಬುವುದನ್ನು ದಂತ ವೈದ್ಯರು ನಿರ್ಧರಿಸುತ್ತಾರೆ. ಮೌತ್ ವಾಶ್ ಎನ್ನುವುದು ಹಲ್ಲುಜ್ಜಿದ ಬಳಿಕ ಒಂದೆರಡು ನಿಮಿಷಗಳ ಕಾಲ 20 ರಿಂದ 30 ಎಂಎಲ್ ಮೌತ್‌ವಾಶ್ ದ್ರಾವಣವನ್ನು ಬಳಸಿ ನಡೆಸಬಹುದಾದ ಬಹಳ ಸರಳವಾದ ಪ್ರಕ್ರಿಯೆಯಾಗಿರುತ್ತದೆ. ಇದು ಹಲ್ಲುಜ್ಜುವ ವ್ಯವಸ್ಥೆಗೆ ಪರ್ಯಾಯ ಅಲ್ಲವೇ ಅಲ್ಲ. ಆದರೆ ಹಲ್ಲುಜ್ಜುವ ಪ್ರಕ್ರಿಯೆಗೆ ಪೂರಕ.

## ಮೌತ್‌ವಾಶ್‌ಗಳಲ್ಲಿ ಎರಡು ವಿಧ

1. ಬಾಯಿವಾಸನೆ ನಿವಾರಣೆ, ಬಾಯಿ ಒಳಗಿನ ಸೋಂಕು ನಿವಾರಣೆ ಮತ್ತು ಬಾಯಿ ದಂತ ಕುಳಿ ಉಂಟಾಗದಂತೆ ತಡೆಯುವ ಮೌತ್‌ವಾಶ್‌ಗಳು.
2. ಹಲ್ಲುಗಳ ಅತೀ ಸಂವೇದನೆ ತಡೆಯುವ ಮೌತ್‌ವಾಶ್‌ಗಳು.

## ಸೌಂದರ್ಯವರ್ಧಕ ಮೌತ್‌ವಾಶ್

ಬಾಯಿ ವಾಸನೆ ಮತ್ತು ಬಾಯಿಯೊಳಗಿನ ಸೋಂಕು ನಿವಾರಣೆಗೆ ಬಳಸುವ ಮೌತ್‌ವಾಶ್‌ಗಳಲ್ಲಿ ಹೆಚ್ಚಾಗಿ 'ಕ್ಲೋರೊಹೆಕ್ಸಿಡಿನ್' ಎಂಬ ಔಷಧಿ (ಶೇ.0.2) ಇರುತ್ತದೆ. ಇದರ ಜೊತೆ ಸೋಡಿಯಂ ಕ್ಲೋರೈಡ್ ಮತ್ತು ಜಿಂಕ್ ಕ್ಲೋರೈಡ್ ಎಂಬ ಎರಡು ಔಷಧಿಗಳನ್ನು ಸೇರಿಸಿ ದಂತ ಕ್ಷಯವಾಗದಂತೆ ಮತ್ತು ವಸಡುಗಳಲ್ಲಿ ಉರಿಯೂತವಾಗದಂತೆ ತಡೆಯಲಾಗುತ್ತದೆ. ಇದರಲ್ಲಿ ಸೋಂಕು ತಡೆಯುವ ಗುಣವೂ ಅಡಕವಾಗಿರುತ್ತದೆ. ಹೆಚ್ಚಾಗಿ ಈ ರೀತಿಯ ಮೌತ್‌ವಾಶ್ ದ್ರಾವಣವನ್ನು ಸೌಂದರ್ಯವರ್ಧಕ ಎಂದೂ ಬಳಸಲಾಗುತ್ತದೆ. ಬಾಯಿಯ ದುರ್ವಾಸನೆ ಇರುವವರು, (ಸ್ಥಳೀಯ ಕಾರಣಗಳಿಂದ) ಈ ದ್ರಾವಣ ಬಳಸಿದ್ದಲ್ಲಿ ಬಾಯಿಯ ದುರ್ವಾಸನೆ ಮಾಯವಾಗಿ ದಂತಕ್ಷಯವಾಗುವುದನ್ನು ತಡೆಯುತ್ತದೆ. ಬಾಯಿಯಲ್ಲಿನ ರೋಗಾಣುಗಳು ಮತ್ತು ಬ್ಯಾಕ್ಟೀರಿಯಾಗಳ ಸಂಖ್ಯೆ ಕಡಿಮೆಯಾಗಿ ಆಹ್ಲಾದಕರವಾದ ಮತ್ತು ಆರೋಗ್ಯವಂತ ಬಾಯಿಯಿಂದಾಗಿ ಉಸಿರಾಡುವಾಗ ಯಾವುದೇ ದುರ್ನಾತ ಬರುವುದಿಲ್ಲ ಮತ್ತು ವ್ಯಕ್ತಿಯ ಆತ್ಮವಿಶ್ವಾಸ ವೃದ್ಧಿಸಿ ಯಾವುದೇ ಹಿಂಜರಿಕೆಯಿಲ್ಲದೆ ಸಾರ್ವಜನಿಕವಾಗಿ ಇತರರೊಡನೆ ಮುಕ್ತವಾಗಿ ಬೆರೆಯಲು ಅನುವು ಮಾಡುತ್ತದೆ. ಈ ಮೌತ್‌ವಾಶ್‌ಗಳಲ್ಲಿರುವ ಫ್ಲೋರೈಡ್, ಬ್ಯಾಕ್ಟೀರಿಯಾಗಳಿಂದ ಉತ್ಪತ್ತಿಯಾಗುವ ಆಸಿಡ್‌ಗಳಿಂದ ಹಲ್ಲು ಮೇಲ್ಪದರವಾದ ಊನಾಮ್‌ಗೆ ಯಾವುದೇ ತೊಂದರೆಯಾಗದಂತೆ ರಕ್ಷಿಸುತ್ತದೆ.

## ಔಷಧಿಕಾರಕ ಮೌತ್‌ವಾಶ್

ಕೆಲವು ಮೌತ್‌ವಾಶ್‌ಗಳಲ್ಲಿ ಪೊಟಾಸಿಯಂ ನೈಟ್ರೇಟ್ ಟ್ರೈಕ್ಲೊಸಾನ್ ಎಂಬ ರಾಸಾಯನಿಕ ಇರುತ್ತದೆ. ಇದರ ಜೊತೆ ಸೋಡಿಯಂ ಕ್ಲೋರೈಡ್ ಎಂಬ ರಾಸಾಯನಿಕಗಳನ್ನು ಸೇರಿಸಲಾಗುತ್ತದೆ. ಇವುಗಳನ್ನು ಸಾಮಾನ್ಯವಾಗಿ ಹಲ್ಲುಗಳ ಎನಾಮಲ್ ಕರಗಿದ ಬಳಿಕ ಉಂಟಾಗುವ ಅತಿ ಸಂವೇದನೆಯನ್ನು ಹೋಗಲಾಡಿಸಲು ಬಳಸುತ್ತಾರೆ. ಈ ರಾಸಾಯನಿಕಗಳು ಹಲ್ಲಿನ ಮೇಲ್ಪದರದಲ್ಲಿ ಒಂದು ವಿಶೇಷ ಪದರ ನಿರ್ಮಿಸಿ ಹಲ್ಲಿನ ಒಳಭಾಗದ ಡೆಂಡಿನ್ ಪದರಕ್ಕೆ ರಕ್ಷಣೆ ನೀಡುತ್ತದೆ, ಈ ರೀತಿಯಾ ಮೌತ್‌ವಾಶ್‌ಗಳನ್ನು ದಂತ ವೈದ್ಯರು ಮಾತ್ರ ನೀಡುತ್ತಾರೆ. ವೈದ್ಯರ ಚೀಟಿ ಇಲ್ಲದೆ ಈ ರೀತಿಯ ಮೌತ್‌ವಾಶ್ ಬಳಸಬಾರದು.

## ಮೌತ್‌ವಾಶ್ ಬಳಕೆ ಹೇಗೆ?

ಮೌತ್‌ವಾಶ್ ಬಳಸುವ ವಿಧಾನವನ್ನು ತಯಾರಕರು ಬಾಟಲಿನ ಮೇಲ್ಭಾಗದಲ್ಲಿ ಮುದ್ರಿಸುತ್ತಾರೆ. ಕೆಲವು ಮೌತ್‌ವಾಶ್‌ಗಳನ್ನು ನೀರು ಬೆರೆಸಿ ಬಳಸಬೇಕಾಗುತ್ತದೆ. ಇನ್ನು ಕೆಲವು ಮೌತ್ ವಾಶ್‌ಗಳನ್ನು ನೀರು ಬೆರೆಸದೆ ಬಳಸಬೇಕಾಗುತ್ತದೆ. ಒಮ್ಮೆ ಬಳಸುವಾಗ 20ರಿಂದ 30 ಎಂಎಲ್ ಮೌತ್ ವಾಶ್ ಬಳಸುತ್ತಾರೆ. ಸುಮಾರು 1 ರಿಂದ 2 ನಿಮಿಷಗಳ ಕಾಲ ಬಾಯಿಯಲ್ಲಿ ದ್ರಾವಣವನ್ನು ಇಟ್ಟುಕೊಂಡು ಬಾಯಿಯ ಎಲ್ಲಾ ಭಾಗಗಳಲ್ಲಿ ಮೌತ್‌ವಾಶ್ ತಾಗುವಂತೆ ಮಾಡಲಾಗುತ್ತದೆ. ಒಂದು ನಿಮಿಷದ ಬಳಿಕ ಉಗುಳಬೇಕು, ಯಾವುದೇ ಕಾರಣಕ್ಕೂ ಮೌತ್‌ವಾಶ್ ನುಂಗಬಾರದು. ಮೌತ್ ವಾಶ್ ಮಾಡಿದ ಬಳಿಕ 30 ನಿಮಿಷಗಳ ಕಾಲ ಯಾವುದೇ ದ್ರವಾಹಾರ ಅಥವಾ ನೀರು ಸೇವನೆ ಮಾಡಬಾರದು.

## ಮೌತ್‌ವಾಶ್: ಅಡ್ಡ ಪರಿಣಾಮಗಳು

- ಬಾಯಿ ಉರಿಯುವುದು, ರುಚಿಯಲ್ಲಿನ ವ್ಯತ್ಯಾಸ ಕಂಡುಬರುತ್ತದೆ.
- ಹಲ್ಲುಗಳ ಬಣ್ಣ ಮಾಸುವುದು ಅಥವಾ ಕಂದುಬಣ್ಣದ ಕಲೆಗಳು ಹಲ್ಲುಗಳಲ್ಲಿ ಕಾಣಿಸಕೊಳ್ಳಬಹುದು.
- ಕೆಲವೊಮ್ಮೆ ಮೌತ್‌ವಾಶ್ ರಾಸಾಯನಿಕಗಳಿಗೆ ಅಲರ್ಜಿ ಉಂಟಾಗಿ ಬಾಯಿಯಲ್ಲಿ ತುರಿಕೆ ಉಂಟಾಗುತ್ತದೆ.
- ಅತಿಯಾದ ಮೌತ್‌ವಾಶ್ ಬಳಕೆಯಿಂದ ತುರಿಕೆ ಮತ್ತು ನಾಲಗೆಯಲ್ಲಿ ಗುಳ್ಳೆ ಕಾಣಿಸಕೊಳ್ಳಬಹುದು ಮತ್ತು ಬಣ್ಣ ಬದಲಾಗುವ ಸಾಧ್ಯತೆಯೂ ಇದೆ.

## ಬಾಯಿ ನೈರ್ಮಲ್ಯ

ಹಲವು ರೋಗಗಳಿಗೆ ರಹದಾರಿ ಬಾಯಿಯೇ ಆಗಿದೆ. ಇದು ಆರೋಗ್ಯವಾಗಿದ್ದರೆ ಬಾಯಿ ಮೂಲಕ ಬರುವ ರೋಗಗಳಿಂದ ಮುಕ್ತರಾಗಬಹುದು. ಬಾಯಿಯ ಸೋಂಕು ಅನೇಕ ರೋಗಗಳನ್ನು ಕಂಡು ಹಿಡಿಯುವುದಕ್ಕೆ ಸುಳಿವು ನೀಡುವ ಕಾರಣ ಬಾಯಿ ನೈರ್ಮಲ್ಯ ಬಹಳ ಮುಖ್ಯ.

ಮುಖ್ಯವಾಗಿ ಬಾಯಿಯನ್ನು ವೈರಾಣು ಸೋಂಕಿನಿಂದ ಮುಕ್ತಗೊಳಿಸಬೇಕು. ಹಲವು ಸೂಕ್ಷ್ಮಾಣು ಜೀವಿಗಳ ಮೂಲಕವೇ ಬಾಯಿ ಹುಳುಕು ಹಲ್ಲು, ವಸಡು ಕಾಯಿಲೆಗಳಿಗೆ ಕಾರಣವಾಗುತ್ತದೆ. ಇದರ ನಿವಾರಣೆಗೆ ಬಾಯಿಯನ್ನು ದಿನಕ್ಕೆ ಹಲವು ಬಾರಿ ಮುಕ್ಕಳಿಸುವುದು, ದಿನಕ್ಕೆರಡು ಬಾರಿ ಹಲ್ಲುಗಳನ್ನು ಬ್ರಷ್ ಮಾಡುವುದು ಅನಿವಾರ್ಯವೇ ಆಗಿದೆ.

